ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

Karnatak University, Dharwad.

ಪರೀಕ್ಷಾ ವಿಭಾಗ

Examination Section

NAAC Accredited with "A" Grade

ಗೌಪ್ಯ ಶಾಖೆ

Confidential Branch

ಫೋ.ನಂ. (O)0836-2215259

ಫ್ಯಾಕ್ಸ ನಂ. 0836-2741928


ನಂ. ಕವಿವಿ/ಪರೀಕ್ಷಾ(ಗೌಪ್ಯ)/2022/ 62

ದಿನಾಂಕ: 20.07.2022

## ಸುತ್ತೋಲೆ

**ವಿಷಯ:** 2021-2022ನೇ ಸಾಲಿನ 2ನೇ ಸೆಮಿಸ್ಟರ್ **NEP/** ರಿಪಿಟರ್ಸ ಹಾಗೂ 4 ಮತ್ತು 6ನೇ ಸೆಮಿಸ್ಟರ್ ರಿಪಿಟರ್ಸ/ರೆಗ್ಯುಲರ್ ವಿದ್ಯಾರ್ಥಿಗಳಿಗೆ ಸ್ನಾತಕ ಪದವಿ ಪ್ರಾಯೋಗಿಕ ಪರೀಕ್ಷೆಗಳನ್ನು ಅಗಸ್ಟ-2022ರಲ್ಲಿ ಜರುಗಿಸುವ ಕುರಿತು.

**ಉಲ್ಲೇಖ:** ಕುಲಪತಿಗಳ ಆದೇಶ ದಿನಾಂಕ:

*-*-*

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ತಿಳಿಸುವುದೇನೆಂದರೆ, 2ನೇ ಸೆಮಿಸ್ಟರ್ **NEP** / ರಿಪಿಟರ್ಸ ಹಾಗೂ 4, 6 ಮತ್ತು 8ನೇ ಸೆಮಿಸ್ಟರ್ ರಿಪಿಟರ್ಸ/ರೆಗ್ಯುಲರ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ತಮ್ಮ ಮಹಾವಿದ್ಯಾಲಯದ ಮಟ್ಟದಲ್ಲಿ ವೇಳಾಪಟ್ಟಿಯನ್ನು ತಯಾರಿಸಿ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಕ್ಕೆ ಎರಡು ಬ್ಯಾಚ್‌ಗಳಂತೆ ಅವಶ್ಯವಿದ್ದಲ್ಲಿ ಪ್ರತಿ ಬ್ಯಾಚ್‌ಗೆ 20 ವಿದ್ಯಾರ್ಥಿಗಳಂತೆ ದಿನಾಂಕ: **11.08.2022** ರಿಂದ **20.08.2022** ಒಳಗಾಗಿ ಜರುಗಿಸಲು ಹಾಗೂ ಅವಶ್ಯವಿದ್ದಲ್ಲಿ ಹೆಚ್ಚುವರಿ ಮೂರು ದಿವಸಗಳನ್ನು ಬಳಸಿಕೊಳ್ಳುವುದು. ಸದರಿ ವಿಷಯವನ್ನು ವಿಶ್ವವಿದ್ಯಾಲಯಕ್ಕೆ ಮಾಹಿತಿ ನೀಡುವುದು.

ಮುಂದುವರೆದು, ಅಗಸ್ಟ, 2022 ರ ಪ್ರಾಯೋಗಿಕ ಪರೀಕ್ಷೆಗಳಿಗೆ ಒಂದು ಬಾರಿಯ ವಿಶೇಷ ಪ್ರಕರಣವೆಂದು ಪರಿಗಣಿಸಿ ಬಾಹ್ಯ ಪರೀಕ್ಷಕರ ನಿಯೋಜಿಸುವ ಬದಲಾಗಿ ಪ್ರಾಯೋಗಿಕ ಪರೀಕ್ಷೆಗಳಿಗೆ ಮಹಾವಿದ್ಯಾಲಯಗಳ ಮಟ್ಟದಲ್ಲಿ ಇಬ್ಬರು ಆಂತರಿಕ ಪರೀಕ್ಷಕರನ್ನು ನಿಯೋಜಿಸಿಕೊಂಡು ಪರೀಕ್ಷೆಗಳನ್ನು ಜರುಗಿಸುವುದು.

ಸ್ನಾತಕ ತರಗತಿಗಳ ಪ್ರಾಯೋಗಿಕ ಪರೀಕ್ಷೆಗಳು ಮುಕ್ತಾಯಗೊಂಡ ನಂತರ ಆಂತರಿಕ ಪರೀಕ್ಷಕರು, ಪ್ರಾಚಾರ್ಯರ ಸಮ್ಮುಖದಲ್ಲಿ ಆಯಾ ಮಹಾವಿದ್ಯಾಲಯದಿಂದ 4, 6 ಮತ್ತು 8ನೇ ಸೆಮೆಸ್ಟರ್‌ಗಳ ವಿದ್ಯಾರ್ಥಿಗಳ ಪ್ರಾಯೋಗಿಕ ಅಂಕಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಿದ ನಮೂನೆಯಲ್ಲಿ ನಮೂದಿಸಿ ಹಾಗೂ **NEP** ಅಡಿಯಲ್ಲಿ 2ನೇ ಸೆಮೆಸ್ಟರ್ ಪ್ರಾಯೋಗಿಕ ಪರೀಕ್ಷಾ ಅಂಕಗಳನ್ನು ಪರೀಕ್ಷೆ ಜರುಗಿದ ದಿನಗಳಂದು **UUCMS Portal** ಮುಖಾಂತರ ಅಂಕಗಳನ್ನು ನಮೂದಿಸುವುದು. ನಂತರ ಆಂತರಿಕ ಪರೀಕ್ಷಕರ ಸಹಿಯೊಂದಿಗೆ ದ್ವಿ-ಪ್ರತಿಯಲ್ಲಿ ತಯಾರಿಸಿದ ಒಂದು ಪ್ರತಿಯನ್ನು ಗಣಕಯಂತ್ರ ಮುಖ್ಯಸ್ಥರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಪರೀಕ್ಷಾ ವಿಭಾಗದ ಅಧೀಕ್ಷರಿಗೆ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಮೂರು ದಿನಗಳೊಳಗಾಗಿ ಕಳುಹಿಸಲು ಸೂಚಿಸಲಾಗಿದೆ.

20/7/22

ಕುಲಸಚಿವರು (ಮೌಲ್ಯಮಾಪನ)

ಗೆ,

ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು

ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :

1. ಹಣಕಾಸು ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಸಿಸ್ಟಮ್ ಅನಾಲಿಸ್ಟ, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ.
4. ಪರೀಕ್ಷಾ ವಿಭಾಗದ ಎಲ್ಲ ಶಾಖೆಗಳ ಅಧೀಕ್ಷಕರ ಮಾಹಿತಿಗಾಗಿ.
5. ಕುಲಪತಿಗಳು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ., ಧಾರವಾಡ.
6. ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ., ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ., ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.